# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 760

ಸದಸ್ಯರ ಹೆಸರು : ಶ್ರೀ.ಬಿ.ಜಿ.ಪಾಟೀಲ್(ಸ್ಥಳೀಯಸಂಸ್ಥೆಗಳಕ್ಷೇತ್ರ)

ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರು

ಉತ್ತರಿಸುವ ದಿನಾಂಕ : 12.12.2023

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿರುವ ರೈತರು ಎಷ್ಟು ಎಕರೆ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆದಿರುತ್ತಾರೆ; (ವಿವರ ನೀಡುವುದು)</td><td>2021-22ನೇ ಸಾಲಿಗೆ ಕಲಬುರಗಿ ಜಿಲ್ಲೆಯಲ್ಲಿ 37976.80 ಮತ್ತು ಯಾದಗಿರಿ ಜಿಲ್ಲೆಯಲ್ಲಿ 20578.49 ಎಕರೆ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆದಿರುತ್ತಾರೆ.<br>ಬೆಳೆವಾರು ವಿವರಗಳು ಈ ಕೆಳಕಂಡಂತಿವೆ:
<table>
<tr><th rowspan="2">ಕ್ರ. ಸಂ</th><th rowspan="2">ಬೆಳೆಗಳು</th><th colspan="2">ವಿಸ್ತೀರ್ಣ(ಎಕರೆಗಳಲ್ಲಿ)</th></tr>
<tr><th>ಕಲಬುರಗಿ ಜಿಲ್ಲೆ</th><th>ಯಾದಗಿರಿ ಜಿಲ್ಲೆ</th></tr>
<tr><td>1</td><td>ಹಣ್ಣುಗಳು</td><td>12172.15</td><td>3743.57</td></tr>
<tr><td>2</td><td>ತರಕಾರಿ ಬೆಳೆಗಳು</td><td>21608.90</td><td>15569.77</td></tr>
<tr><td>3</td><td>ಸಾಂಬಾರು ಬೆಳೆಗಳು</td><td>2157.18</td><td>845.08</td></tr>
<tr><td>4</td><td>ತೋಟದ ಬೆಳೆಗಳು</td><td>363.24</td><td>219.92</td></tr>
<tr><td>5</td><td>ವಾಣಿಜ್ಯಪುಷ್ಪಗಳು</td><td>1583.91</td><td>138.38</td></tr>
<tr><td>6</td><td>ಔಷಧೀಯ ಬೆಳೆಗಳು</td><td>0.00</td><td>34.59</td></tr>
<tr><td>7</td><td>ಸುಗಂಧಿತ ಬೆಳೆಗಳು</td><td>91.43</td><td>27.18</td></tr>
<tr><td colspan="2">ಒಟ್ಟು</td><td>37976.80</td><td>20578.49</td></tr>
</table></td></tr>
<tr><td>ಆ</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಂದ ತೋಟಗಾರಿಕೆ ಇಲಾಖೆಗೆ ಒಟ್ಟು ಎಷ್ಟು ರೈತರು ಹನಿ ನೀರಾವರಿ ಯೋಜನೆಯಡಿ ಸಹಾಯಧನ ಪಡೆಯಲು ಅರ್ಜಿಸ ಲ್ಲಿಸಿರುತ್ತಾರೆ.</td><td>ಕಲಬುರಗಿ ಮತ್ತು ಯಾದಗಿರಿಜಿಲ್ಲೆಗಳಿಂದ ತೋಟಗಾರಿಕೆ ಇಲಾಖೆಗೆ 3 ವರ್ಷಗಳಿಂದ ಎಂದರೆ, 2021-22 & 2022-23 ಮತ್ತು 2023-24ರಲ್ಲಿ 1704 ಮತ್ತು 1026 ಸಂಖ್ಯೆಯ ರೈತರು ಹನಿ ನೀರಾವರಿ ಯೋಜನೆಯಡಿ ಸಹಾಯಧನ ಪಡೆಯಲು ಅರ್ಜಿ ಸಲ್ಲಿಸಿರುತ್ತಾರೆ.</td></tr>
</table>

| | | |
|---|---|---|
| ಇ | ಸಹಾಯಧನ ಕೋರಿ ಅರ್ಜಿ ಸಲ್ಲಿಸಿದ ರೈತರೆಲ್ಲರಿಗೂ ಸಹಾಯಧನ ಬಿಡುಗಡೆ ಮಾಡಲಾಗಿದೆಯೇ? | ಈ ಪೈಕಿ ಕಲಬುರ್ಗಿ ಮತ್ತು ಯಾದಗಿರ್ ಜಿಲ್ಲೆಗಳಲ್ಲಿ ಅರ್ಹ1466 ಮತ್ತು 642 ರೈತರಿಗೆ ಬಿಡುಗಡೆ ಮಾಡಲಾಗಿದೆ. ಉಳಿದ ಅರ್ಜಿಗಳು ಪರಿಶೀಲನಾ ಹಂತದಲ್ಲಿರುತ್ತವೆ. |
| ಈ | ಸಹಾಯಧನ ಪಡೆಯಲು ಸರ್ಕಾರ ನಿಗದಿಮಾಡಿರುವ ಮಾನ ದಂಡಗಳೇನು?(ವಿವರ ನೀಡುವುದು) | ಸಹಾಯಧನ ನೀಡಲು ಅನುಸರಿಸುತ್ತಿರುವ ಮಾನದಂಡಗಳ ವಿವರ ಈ ಮುಂದಿನಂತಿದೆ.<br><br>1.ಫಲಾನುಭವಿಗಳು ರೈತರಾಗಿದ್ದು, ಜಮೀನು ಅವರ ಹೆಸರಿನಲ್ಲಿರಬೇಕು ಹಾಗೂ ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಾಗಿರಬೇಕು ಅಥವಾ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಉದ್ದೇಶಿಸಿರಬೇಕು.<br><br>2. ರೈತರ ತಾಕಿನಲ್ಲಿ ನೀರಾವರಿ ಸೌಲಭ್ಯಕ್ಕೆ ನೀರಿನ ಮೂಲ ಇರಬೇಕು.<br><br>3.ಸೂಕ್ಷ್ಮ ನೀರಾವರಿ ಘಟಕಗಳು ಕಾರ್ಯನಿರ್ವಹಿಸಲು ಅವಶ್ಯವಿರುವ ವಿದ್ಯುಚ್ಛಕ್ತಿ ಅಥವಾ ಇತರೆ ಶಕ್ತಿ ಮೂಲಗಳನ್ನು ಹೊಂದಿರಬೇಕು.<br><br>4. ಪ್ರತಿ ಫಲಾನುಭವಿ ಕುಟುಂಬಕ್ಕೆ ಗರಿಷ್ಠ 5 ಹೆಕ್ಟೇರ್ ಪ್ರದೇಶದವರೆಗೆ ಸಹಾಯಧನ ನೀಡಲಾಗುವುದು.<br><br>5. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ರೈತರು, ಸದರಿ ಪಂಗಡಗಳಿಗೆ ಸೇರಿರುವ ಬಗ್ಗೆ RD ಸಂಖ್ಯೆ ಇರುವಂತಹ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. |

NO:HORTI 466 HGM 2023

S. S. Mallikarjun

(ಎಸ್.ಎಸ್.ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು